ದಿನಾಂಕ 05-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ 1, 2, 4 ಮತ್ತು 6 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಬಿ.ಕೆ ವಕೀಲರಿಂದಃ</u>**

1. ದಾವಾ ಶೆಡ್ಯೂಲ್ ಆಸ್ತಿಗಳು ಮೂಲತಃ ಭೂ ನ್ಯಾಯ ಮಂಡಳಿಯಿಂದ ಮಂಜೂರಾದ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಗಳು ಮೆಹಬೂಬಸಾಬ ರವರಿಗೆ ಮಂಜೂರಿ ಆಗಿದ್ದವು. ಮೆಹಬೂಬಸಾಬ ನನ್ನ ದೊಡ್ಡಪ್ಪ. 1, 2 ಪ್ರತಿವಾದಿಗಳು ಹಾಗೂ ಚಾಂದುಸಾಬ ಕೋಟಿ ರವರು ನನ್ನ ಚಿಕ್ಕಪ್ಪಂದಿರು. ನನ್ನ ಅಜ್ಜನ ಹೆಸರು ಪೀರಸಾಬ ಎಂದರೆ ಸರಿ. ಪೀರಸಾಬ ರವರಿಗೆ ಗೌಸುಸಾಬ, ಅದಂಸಾಬ, ಚಾಂದುಸಾಬ, ಅದಮಸಾಬ, ಇಮಾಂಸಾಬ ಮತ್ತು ಮಹಮದ್ ಯೂಸೂಪ್ ಎಂಬ 6 ಜನ ಮಕ್ಕಳು. ದಾವಾ ಶೆಡ್ಯೂಲ್ ಆಸ್ತಿಗಳು ನನಗೆ ಮೆಹಬೂಬ ಸಾಬ ರವರಿಂದ ವಾಟ್ನಿ ಮೂಲಕ ಬಂದಿರುತ್ತವೆ.

2. ದಾವಾ ಆಸ್ತಿಗಳನ್ನು ಹೊರತುಪಡಿಸಿ ಪೀರಸಾಬ ಕೋಟಿ ಯವರ ಕುಟುಂಬಕ್ಕೆ 7 ಎಕರೆ ಜಮೀನು ಇದ್ದವು. ಭೂ ನ್ಯಾಯ ಮಂಡಳಿಯು ಮಂಜೂರು ಮಾಡಿದ ದಾವಾ ಆಸ್ತಿಗಳನ್ನು ಮೆಹಬೂಬಸಾಬ ನೊಂದಿಗೆ ನನ್ನ ಅಜ್ಜ ಪೀರಸಾಬ ಜೊತೆಗೆ ವಹಿವಾಟು ಮಾಡುತ್ತಿದ್ದನು ಎಂದರೆ ಗೊತ್ತಿಲ್ಲ. ಈ ದಾವೆಯನ್ನು ಮಾಲೀಕತ್ವವನ್ನು ಕೋರಿ ಮತ್ತು ದಾವಾ ಆಸ್ತಿಗಳ ವಹಿವಾಟಿಗೆ ತೊಂದರೆ ಮಾಡದಂತೆ ಸಲ್ಲಿಸಿರುತ್ತೇನೆ. ದಾವಾ ಶೆಡ್ಯೂಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೊರತುಪಡಿಸಿ ಮೊದಲು ಎರಡು ದಾವೆಗಳನ್ನು ಸಲ್ಲಿಸಿದ್ದೆ. ಈ ದಾವೆಯ ಪೂರ್ವದಲ್ಲಿ 3 ದಾವೆಗಳನ್ನು ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

3. ವಾದ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ. ಈ ಹಿಂದೆ ಸಲ್ಲಿಸಿದ್ದೇನೆ ಎಂದು ಆಧರಿಸಿರುವ 2 ದಾವೆಗಳ ಮಾಹಿತಿಗಳನ್ನು ಈ ದಾವೆಯಲ್ಲಿ ಬರೆಸಿದ್ದೇನೆ. ದಾವಾ ಆಸ್ತಿಗಳು ಜಾನಗುಂಡಿಕೊಪ್ಪ ಗ್ರಾಮಕ್ಕೆ ಹೊಂದಿಕೊಂಡಂತೆ ಇವೆ ಎಂದರೆ ಸರಿ. ದಾವಾ ಆಸ್ತಿಗಳು ಒಂದಕ್ಕೊಂದು ಹೊಂದಿಕೊಂಡಿದ್ದವೆ ಎಂದರೆ ಸರಿ. ದಾವಾ ಶೆಡ್ಯೂಲ್ ಆಸ್ತಿಗಳ ಪೂರ್ವ ದಿಕ್ಕಿಗೆ ಸರಕಾರಿ ರಸ್ತೆ ಇದೆ. ದಾವಾ ಆಸ್ತಿಗಳಲ್ಲಿ ನನ್ನ ಮನೆಯು ಪೂರ್ವ ದಿಕ್ಕಿಗೆ ಇದೆ. ನನ್ನ ಮನೆಯ ಯಾವುದೇ ದಿಕ್ಕಿನಲ್ಲಿಯೂ 1 ನೇ ಪ್ರತಿವಾದಿಯ ಮನೆ ಇರುವುದಿಲ್ಲ.

4. ಸ ನಂಃ 40/1 ರ ಜಮೀನಿನ ಒಟ್ಟು ವಿಸ್ತೀರ್ಣ 2 ಎಕರೆ 20 ಗುಂಟೆ. ಸದರಿ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ನೋಡಿರುತ್ತೇನೆ. ಪಹಣಿ ಪತ್ರಿಕೆಯಂತೆ ಸದರಿ ಜಮೀನಿನ ಒಟ್ಟು ವಿಸ್ತೀರ್ಣ 5 ಎಕರೆ 18 ಗುಂಟೆ ಇದ್ದು ಅದರಲ್ಲಿ 18 ಗುಂಟೆ ಪೂಟು ಖರಾಬು ಇರುತ್ತದೆ ಎಂದರೆ ಸಾಕ್ಷಿಯು ಸದರಿ ಒಟ್ಟು ಕ್ಷೇತ್ರದ ಪೈಕಿ ನಾಡಗೇರ ಕುಟುಂಬದ ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ. 2 ಎಕರೆ 20 ಗುಂಟೆ ಹೊರತುಪಡಿಸಿ ಉಳಿಕೆ ಕ್ಷೇತ್ರದಲ್ಲಿ ಗೌಸಮೋದಿನ, ಖಾಸಿಂಸಾಬ ಮತ್ತು ನಾಡಗೇರ ಕುಟುಂಬದ ಜಮೀನು ಇವೆ. ಸ ನಂಃ 40/1 ರ ಪೂ- ರಸ್ತೆ, ಪ- ನಾಡಗೇರ ರವರ ಜಮೀನು, ಉ- ಕಾಲುವೆ, ದ- ಗೌಸಮೋದಿನ ಕೋಟಿ ರವರ ಜಮೀನು ಇವೆ.

5. ಸ ನಂಃ 50 ರ ಜಮೀನಿನ ಒಟ್ಟು ಕ್ಷೇತ್ರ 12 ಎಕರೆ 01 ಗುಂಟೆ. ಪಹಣಿ ಪತ್ರಿಕೆಯಂತೆ ಸದರಿ ಜಮೀನಿನ ಒಟ್ಟು ವಿಸ್ತೀರ್ಣ 13 ಎಕರೆ 1 ಗುಂಟೆ ಇದ್ದು ಅದರಲ್ಲಿ 28 ಗುಂಟೆ ಪೂಟು ಖರಾಬು ಇದೆ ಎಂದರೆ ಸರಿ. ಸದರಿ ಒಟ್ಟು ಕ್ಷೇತ್ರವಾದ 13 ಎಕರೆ 1 ಗುಂಟೆಯ ಪ- ಗುಡ್ಡ, ಪೂ-ರಸ್ತೆ, ಉ- ನಾಡಗೇರ ರವರ ಜಮೀನು, ದ- ನಾಡಗೇರ ರವರ ಜಮೀನು ಇವೆ. ಸದರಿ ಒಟ್ಟು ಚಕ್ಕುಬಂದಿಯ ಪೂರ್ವ ಭಾಗದಲ್ಲಿ ನನ್ನ ಜಮೀನು

ಇದೆ. ಸದರಿ ನನ್ನ ಜಮೀನಾದ ಪೂರ್ವ ಭಾಗದ 20 ಗುಂಟೆಯ ಯಾವುದೇ ಚಕ್ಕುಬಂದಿಯಲ್ಲೂ ಸ ನಂಃ 40/1 ಬರುವುದಿಲ್ಲ.

6. ದಾವಾ ಶೆಡ್ಯೂಲ್ 2 ನೇ ಸ್ವತ್ತಾದ 20 ಗುಂಟೆಗೆ ಹತ್ತಿ ದಾವಾ ಶೆಡ್ಯೂಲ್ ಜಮೀನಾದ 1 ಎಕರೆ 10 ಗುಂಟೆ ಇದೆ. ಸದರಿ 1 ಎಕರೆ 10 ಗುಂಟೆ ಜಮೀನು 20 ಗುಂಟೆ ಜಮೀನಿನ ಪೂರ್ವಕ್ಕೆ ಇದೆ. ದಾವಾ ಆಸ್ತಿಗಳ ಪೂರ್ವ ದಿಕ್ಕಿಗೆ ಇರುವ ಸರಕಾರಿ ರಸ್ತೆಗಳಿಗೆ ಹೊಂದಿ ಪಶ್ಚಿಮಕ್ಕೆ ಸಾಲು ಮನೆಗಳು ಇವೆ ಎಂದರೆ ಸಾಕ್ಷಿಯು ನನ್ನ ಒಂದು ಮನೆ ಮಾತ್ರ ಇದೆ ಎಂದು ನುಡಿಯುತ್ತಾರೆ. ನನ್ನ ಸದರಿ ಮನೆಗೆ ಇದುವರೆಗೂ ಗ್ರಾಮ ಪಂಚಾಯಿತಿಯವರು ಸಂಖ್ಯೆಯನ್ನು ನೀಡಿರುವುದಿಲ್ಲ. ಸದರಿ ಮನೆಗೆ ವಿದ್ಯುತ್ ಸಂಪರ್ಕ ಮತ್ತು ನೀರಿನ ಸಂಪರ್ಕವನ್ನು ಪಡೆದಿರುತ್ತೇನೆ. ಗ್ರಾಮ ಪಂಚಾಯಿತಿ ಮನೆಗೆ ಸಂಖ್ಯೆಯನ್ನು ನೀಡದೇ ಇದ್ದಲ್ಲಿ ಅದಕ್ಕೆ ವಿದ್ಯುತ್ ಸಂಪರ್ಕವಾಗಲೀ ಅಥವಾ ನೀರಿನ ಸಂಪರ್ಕವಾಗಲೀ ನೀಡುವುದಿಲ್ಲ ಎಂದರೆ ಸರಿಯಲ್ಲ.

7. ಒಟ್ಟು ದಾವಾ ಆಸ್ತಿಗಳಲ್ಲಿ 1 ಎಕರೆ 30 ಗುಂಟೆ ನನ್ನ ಸ್ವಾಧೀನದಲ್ಲಿದೆ. ದಾವಾ ಆಸ್ತಿಗಳ ಸ್ವಾಧೀನವನ್ನು ನಾನು 1993 ರಿಂದಲೂ ಹೊಂದಿರುತ್ತೇನೆ. ಸದರಿ ಕಾಲದಿಂದಲೂ ದಾವಾ ಆಸ್ತಿಗಳ ಕಬ್ಜೆಯು ಇಂದಿಗೂ ಸಹ ನನ್ನ ಬಳಿಯೇ ಇದ್ದು, ತಪ್ಪಿರುವುದಿಲ್ಲ. ಪ್ರತಿವಾದಿಯರ ವಿರುದ್ದ ನಾನು ಅಸಲು ದಾವಾ ಸಂಃ 72/2007 ರ ದಾವೆಯನ್ನು ಸಲ್ಲಿಸಿದ್ದೆ. ಸದರಿ ದಾವೆಯನ್ನು ನಾನು ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳು ಮತ್ತು 3 ರಿಂದ 6 ನೇ ಪ್ರತಿವಾದಿಗಳ ತಂದೆ ಚಾಂದುಸಾಬ ಕೋಟಿ ರವರ ವಿರುದ್ದ ದಾವಾ ಆಸ್ತಿಗಳನ್ನು ಒತ್ತುವರಿ ಮಾಡಿದ್ದಾರೆಂದು ಹಾಗೂ ಅದನ್ನು ಕಬ್ಜೆಗೆ ಕೊಡಿಸಬೇಕೆಂದು ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯು ರಾಜೀಯ ಮೂಲಕ ಇತ್ಯರ್ಥವಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಸಲ್ಲಿಸಿದ ರಾಜೀ ಪತ್ರದಂತೆ

ದಾವಾ ಆಸ್ತಿಗಳ ಪೈಕಿ ಸನಂಃ 50 ರಲ್ಲಿ ಚಾಂದುಸಾಬ ಕೋಟಿ ಪೂರ್ವಭಾಗದಲ್ಲಿ ಮನೆಯನ್ನು ಕಟ್ಟಿಕೊಂಡಿದ್ದು, ಅದು ಆತನಿಗೆ ಸೇರಿದ ಆಸ್ತಿ ಎಂದು ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಚಾಂದುಸಾಬ ಕೋಟಿ ಕಟ್ಟಿಕೊಂಡಿದ್ದ ಮನೆಗೆ ಗ್ರಾಮ ಪಂಚಾಯಿತಿಯ ವಿಪಿಸಿ ಆಸ್ತಿ ಸಂಃ 155/3 ಎಂದು ಇದೆ ಎಂದು ರಾಜೀ ಪತ್ರದಲ್ಲಿ ನಮೂದು ಮಾಡಲಾಗಿತ್ತು ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ಯಾರೂ ವಾಸ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು, ಸದರಿ ಮನೆಯನ್ನು ಅನಧಿಕೃತವಾಗಿ ಕಟ್ಟಿಕೊಂಡಿದ್ದು, ಅದನ್ನು ತೆಗೆಯಲಾಗಿದೆ ಎಂದು ನುಡಿಯುತ್ತಾರೆ. ಅದೇ ರಾಜೀ ಅರ್ಜಿಯಲ್ಲಿ ಈ ದಾವೆಯ 1 ನೇ ಪ್ರತಿವಾದಿಯಾದ ಅದಂಸಾಬ ಕೋಟಿ ರವರು ಸ ನಂಃ 41/1 ಮತ್ತು 50 ರ ಜಮೀನಿನ ಒಟ್ಟು ಪೂರ್ವ ಭಾಗದ 2 ವರೆ ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ಖುಲ್ಲಾ ಜಾಗವನ್ನು ಬಿಟ್ಟುಕೊಂಡಿದ್ದು, ಅದಕ್ಕೆ ಗ್ರಾಮ ಪಂಚಾಯಿತಿ ಆಸ್ತಿ ಸಂಃ 30/4 ಎಂದು ನೀಡಲಾಗಿದೆ ಎಂದು ನಾನು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಅದೇ ರಾಜೀ ಅರ್ಜಿಯಲ್ಲಿ 2 ನೇ ಪ್ರತಿವಾದಿಯಾದ ಇಮಾಂಸಾಬ ಕೋಟಿ ರವರು ಸದರಿ ಎರಡೂ ಜಮೀನುಗಳ ಒಟ್ಟು ಪೂರ್ವ ಭಾಗದ 2 ವರೆ ಗುಂಟೆ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡು ಮತ್ತು ಖುಲ್ಲಾ ಜಾಗವನ್ನು ಬಿಟ್ಟುಕೊಂಡಿದ್ದು, ಅದಕ್ಕೆ ಗ್ರಾಮ ಪಂಚಾಯಿತಿ ಸಂಃ 31/3 ಎಂದು ಇದ್ದು, ಅದರ ಮೇಲೆ ನನಗೆ ಮಾಲ್ಕಿ ಹಕ್ಕು ಇಲ್ಲ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ರಾಜೀ ಅರ್ಜಿಯಲ್ಲಿ ಸ ನಂಃ 50 ರ ಪಶ್ಚಿಮ ಭಾಗದ 1 ಗುಂಟೆಯನ್ನು ಈ ದಾವೆಯ 2 ನೇ ಪ್ರತಿವಾದಿ ವಹಿವಾಟು ಮಾಡುತ್ತಿದ್ದಾನೆ ಎಂದು ಮತ್ತು ಅದರ ಮೇಲೆ ನನಗೆ ಹಕ್ಕು ಇಲ್ಲ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ.

8. ಸಾಕ್ಷಿಗೆ ವಾದ ಪತ್ರದಲ್ಲಿ ವಾದಿಯ ಸಹಿ ಎಂಬುವ ಶಬ್ದದ ಮೇಲೆ ಬರೆದಿರುವ ಸಹಿಗಳನ್ನು ತೋರಿಸಲಾಗಿ ಅವುಗಳು ತನ್ನ ಸಹಿ ಅಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ

ನಿ.ಪಿ-7 ರ ಅಸಲು ದಾವಾ ಸಂಃ 72/2007 ರ ರಾಜೀ ಪತ್ರದಲ್ಲಿ ವಾದಿಯ ಸಹಿಯು ಯಾರ ಸಹಿ ಎಂದು ಕೇಳಲಾಗಿ ಸಾಕ್ಷಿಯು ಕಾಣಿಸುವುದಿಲ್ಲ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ನ್ಯಾಯಾಲಯವು ಸಾಕ್ಷಿಗೆ ಕನ್ನಡಕವನ್ನು ಉಪಯೋಗಿಸುತ್ತೀಯಾ ಎಂದು ಕೇಳಲಾಗಿ ಇಲ್ಲಾ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ನಾನು ಒಬ್ಬನೇ ಬಂದಿರುತ್ತೇನೆ. ನನ್ನ ಸ್ಥಳದಿಂದ ನ್ಯಾಯಾಲಯಕ್ಕೆ ಬರಲು ಯಾರ ಸಹಾಯವನ್ನು ಪಡೆಯುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ